ಕರ್ನಾಟಕ ವಿಧಾನಸಭೆ

ಮಂಗಳವಾರ 22ನೇ ಜನವರಿ 2002 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರಾದ ಶ್ರೀ ಎಂ ವಿ ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು

1) ಮಾನ್ಯ ಸದಸ್ಯರುಗಳಿಗೆ ಅಧ್ಯಕ್ಷರಿಂದ ಹೊಸವರ್ಷದ ಶುಭಾಶಯಗಳು

ಅಧ್ಯಕ್ಷರು ಮಾನ್ಯ ಸದಸ್ಯರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು, ಎಲ್ಲಾ ಸದಸ್ಯರುಗಳು ಅವರವರ ಕ್ಷೇತ್ರಗಳಲ್ಲಿ ಚೆನ್ನಾಗಿ ಹೆಚ್ಚು ಹೆಚ್ಚಾಗಿ ಕೆಲಸಗಳನ್ನು ಮಾಡಿ ಮತದಾರರ ಅಶೋತ್ತರಗಳನ್ನು ಈಡೇರಿಸಬೇಕು ಅದಕ್ಕೆ ಸರ್ಕಾರವೂ ಸಹಕಾರ ಕೊಡಬೇಕೆಂಬುದು ನನ್ನ ಕೋರಿಕೆಯಾಗಿದೆ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೇ, ಅದಕ್ಕೆ ನಮಗೂ ಮಾತನಾಡಲು ಸಾಕಷ್ಟು ಕಾಲಾವಕಾಶವನ್ನು ಕೊಡಬೇಕು, ಅದರಲ್ಲೂ ನಮ್ಮ ಕಡೆ ನೋಡಿಕೊಂಡು ಕೊಡಬೇಕು

ಅಧ್ಯಕ್ಷರು ನಾನು ಅದನ್ನು ನೋಡಿಕೊಂಡು ಕೊಡುತ್ತಿದ್ದೇನೆ, ಅದರಲ್ಲಿ ನಾನು ಯಾವತ್ತೂ ಡಿಸ್‌ಕ್ರಿಮಿನೇಟ್ ಮಾಡಿಲ್ಲವಲ್ಲಾ?

2) ನಿಲುವಳಿ ಸೂಚನೆ ಮಂಡನೆಗೆ ಒತ್ತಾಯ

ವಿಷಯ ರಾಜ್ಯದಲ್ಲಿ ನಡೆದಿರುವ ನಕಲಿ ಸ್ಟ್ಯಾಂಪ್ ಪೇಪರ್ ಹಗರಣ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) ಮಾನ್ಯ ಸಭಾಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ಒಂದು ಪ್ರಮುಖವಾದಂತಹ ಹಗರಣ ಹೊರ ಬಂದಿದೆ ಅದು ನಕಲಿ ಸ್ಟ್ಯಾಂಪ್ ಪೇಪರ್ ಹಗರಣ ಇದು 10 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ನಕಲಿ ಛಾಪಾ ಕಾಗದ ವ್ಯಾಪಾರವಾಗಿರುವಂಥಾದ್ದು ಈ ವಿಚಾರವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿದ್ದೇವೆ ಅದಕ್ಕೆ ದಯಮಾಡಿ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕು ಇದು ದೊಡ್ಡ ಹಗರಣ, ಇವತ್ತು ಇಡೀ ರಾಜ್ಯದಲ್ಲಿ ಆರ್ಥಿಕ ಭಯೋತ್ಪಾದನೆ ನಡೆಯುತ್ತಿದೆ

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಸಭಾಧ್ಯಕ್ಷರೇ, ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಅಧ್ಯಕ್ಷರೇ, ನಾವು ಇನ್ನೂ ಯಾವ ವಿಷಯದ ಮೇಲೆ ನಿಲುವಳಿ ಸೂಚನೆಯನ್ನು ತಂದಿದ್ದೇವೆಂದು ಸಬ್‌ಮಿಷನ್ ಮಾಡಿಲ್ಲ, ಆಗಲೇ ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರೆ ಹೇಗೆ?

ಶ್ರೀ ಡಿ ಬಿ ಚಂದ್ರೇಗೌಡ ಮಾನ್ಯ ಅಧ್ಯಕ್ಷರೇ, ನಾನು ಹೇಳುವಂಥಾದ್ದು ಪ್ರಶ್ನೋತ್ತರ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದೇನೆ

ಶ್ರೀ ಜಗದೀಶ್ ಶಟ್ಟರ್ ಮಾನ್ಯ ಮಂತ್ರಿಗಳು ಹೇಳುವಂಥಾದ್ದು ಸರಿ, ನಾವು ವಿಶೇಷ ಸಂದರ್ಭಗಳಲ್ಲಿ ಪ್ರಶ್ನೋತ್ತರವನ್ನು ಬದಿಗಿಟ್ಟು ವಿಷಯಗಳನ್ನು ತೆಗೆದುಕೊಂಡಿದ್ದೇವೆ, ಅದರ ಬಗ್ಗೆ ಸಂಪ್ರದಾಯವೂ ಇದೆ

ಅಧ್ಯಕ್ಷರು ಮಾನ್ಯ ಜಗದೀಶ್ ಶೆಟ್ಟರೇ, ನಾನು ಹೇಳುವಂಥಾದ್ದು ಏನೆಂದರೆ ಎಲ್ಲಾ ಪಕ್ಷದ ಸದಸ್ಯರುಗಳು ಪ್ರಶ್ನೆಗಳನ್ನು ಕಳುಹಿಸಿರುತ್ತಾರೆ ಅದಕ್ಕೆ ನಾವು ಉತ್ತೇಜನವನ್ನು ಕೊಡಬೇಕಾಗುತ್ತದೆ ಮಾನ್ಯ ಸದಸ್ಯರುಗಳಿಗೆ ಎಷ್ಟೋ ವಿಷಯಗಳು ಗೊತ್ತಾಗಿರುತ್ತದ, ಅದಕ್ಕೆ ಸರ್ಕಾರವೂ ಇನ್‌ಫರ್‌ಮೇಷನ್ ಕೊಡಬೇಕಾಗುತ್ತದೆ ಆದುದರಿಂದ ಈ ವಿಚಾರವನ್ನು ಪ್ರಶ್ನೋತ್ತರ ಸಮಯ ಒಂದು ಗಂಟೆ ಇದೆ ಇದಾದ ಮೇಲೆ ತೆಗೆದುಕೊಳ್ಳೋಣ

ಶ್ರೀ ಜಗದೀಶ್ ಶಟ್ಟರ್ ಮಾನ್ಯ ಅಧ್ಯಕ್ಷರೇ, ದಯಮಾಡಿ ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳಿ, ಇದು ಒಹಳ ಪ್ರಮುಖವಾದಂತಹ ವಿಷಯವಾಗಿದೆ

ಅಧ್ಯಕ್ಷರು ತೆಗೆದುಕೊಳ್ಳೋಣ Definitely we will take up

3) ಹೊಸ ಸಚಿವರ ಪರಿಚಯ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೇ, ಹೊಸ ಸಚಿವರನ್ನು ಸಭೆಗೆ ಪರಿಚಯ ಮಾಡಿಕೊಡುವಂಥಾದ್ದು ಒಳ್ಳೆಯ ಸಂಪ್ರದಾಯವೆಂದು ಅನ್ನಿಸುತ್ತದೆ ಅವರ ಪರಿಚಯವನ್ನು ಮಾಡಿಕೊಡಲಿಲ್ಲ, ಮಾನ್ಯ ಮುಖ್ಯಮಂತ್ರಿಯವರು ಸಭೆಗೆ ಸಚಿವರುಗಳನ್ನು ಪರಿಚಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಗಳು) ಮಾನ್ಯ ಸಭಾಧ್ಯಕ್ಷರೇ, ನಮ್ಮ ಸಚಿವರ ಸಂಪುಟದ ನೂತನ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡುತ್ತೇನೆ